ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 2, Sep-Oct 2019, 27-36
©IIMRD, Mysuru

IIMRD JOURNALS
www.iimrd.com

# ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳು

**ಡಾ. ಕುಮಾರ ಎಸ್.ಕೆ[1]**

**ಪೀಠಿಕೆ**

ಮನೆಯ ಅಂಗಳದಲ್ಲಿ ಆಡುತ್ತಿರುವ ಮಗುವನ್ನೂ, ಉದ್ಯಾನವನದಲ್ಲಿ ಕುಣಿದು ಕುಪ್ಪಳಿಸುತ್ತಿರುವ ಮಕ್ಕಳನ್ನು, ಶಾಲೆಯ ವಿವಿಧ ಆಟ, ಪಾಠ, ಚಟುವಟಿಕೆಗಳಲ್ಲಿ ಭಾಗವಹಿಸುವ ಉತ್ಸಾಹಿ ಮಕ್ಕಳನ್ನು ನೋಡಿದಾಗ ಅವುಗಳ ಸಹಜ ಬೆಳವಣಿಗೆ ಮತ್ತು ಚಟುವಟಿಕೆಯ ಬಗ್ಗೆ ನಾವು ಹೆಚ್ಚೇನೂ ಯೋಚಿಸುವುದಿಲ್ಲ. ಪ್ರತಿ ತಂದೆ–ತಾಯಿಯರೂ ತಮ್ಮ ಮಕ್ಕಳಲ್ಲಿ ಈ ಸಹಜ ಪ್ರವೃತ್ತಿಯನ್ನೇ ಅಪೇಕ್ಷಿಸುತ್ತಾರೆ. ಆದರೆ ಕೆಲವು ಸಂದರ್ಭದಲ್ಲಿ ಕೆಲವು ಮಕ್ಕಳಲ್ಲಿ ಮಾತಿನ ಬೆಳವಣಿಗೆ, ದೈಹಿಕ ಬೆಳವಣಿಗೆ, ಬೌದ್ಧಿಕ ಬೆಳವಣಿಗೆ ಸಹಜ ರೀತಿಯಲ್ಲಿ ಇರುವುದಿಲ್ಲ. ಈ ಮಕ್ಕಳು ಸಾಮಾನ್ಯ ಮಕ್ಕಳಂತೆ ಇಲ್ಲದಿರುವುದರಿಂದ ಬೇರೆ ಎನಿಸುತ್ತಾರೆ. ವಿಶೇಷ ಮಕ್ಕಳೆಂದು ಕರೆಸಿಕೊಳ್ಳುತ್ತಾರೆ. ವಿಶೇಷಚೇತನರು ಎಂಬ ಪಟ್ಟಿಯೊಂದಿಗೆ ಸಮಾಜದ ಸ್ಥರಗಳಲ್ಲಿ ಬೆರೆತುಕೊಳ್ಳುತ್ತಾರೆ.

ಅಂಗವಿಕಲತೆ ಯಾವುದೋ ಒಂದು ಸಮಾಜಕ್ಕೆ, ವ್ಯಕ್ತಿಗೆ, ದೇಶಕ್ಕೆ ಸಂಬಂಧಿಸಿದುದ್ದಲ್ಲ, ಇದು ಸರ್ವವ್ಯಾಪ್ತಿ. ಎಲ್ಲಾ ಕಾಲದಲ್ಲೂ ಎಲ್ಲಾ ದೇಶದಲ್ಲೂ ಕಾಣಬಹುದಾದ ಈ ಅಂಗವಿಕಲತೆ ಒಂದು ಶಾರೀರಿಕ ಸ್ಥಿತಿ. ಅದರ ಸ್ವರೂಪ ಹಲವು ರೀತಿಯದು. ಸಾಮಾನ್ಯವಾಗಿ ಅಂಗವಿಕಲತೆಯನ್ನು ಅದರ ಸ್ವರೂಪದ ಆಧಾರದ ಮೇಲೆ ಶ್ರವಣ ನ್ಯೂನ್ಯತೆ, ಬುದ್ಧಿಮಾಂದ್ಯತೆ, ದೃಷ್ಟಿ ದೋಷ, ದೈಹಿಕ ನ್ಯೂನ್ಯತೆ, ಕಲಿಕೆಯಲ್ಲಿ ದೋಷಗಳು ಎಂದು ಗುಂಪು ಮಾಡಬಹುದು.

ಒಂದೊಂದು ನ್ಯೂನ್ಯತೆಯನ್ನು ಹೊಂದಿರುವ ಮಗುವು ಒಂದೊಂದು ರೀತಿಯ ಸಮಸ್ಯೆಯನ್ನು ಪ್ರಕಟಿಸುತ್ತದೆ. ಬುದ್ಧಿಮಾಂದ್ಯ ದೋಷ ಹೊಂದಿರುವ ಮಗುವಿನ ಮುಖ್ಯ ಸಮಸ್ಯೆಯೆಂದರೆ, ಮಾತು ಮತ್ತು ಭಾಷೆಯನ್ನು ಕಲಿಯುವುದರಲ್ಲಿ ಅಡಚಣೆಯನ್ನು ಅನುಭವಿಸುವುದು. ಈ ಮಗುವು ತಾನಾಗಿಯೇ ಕಲಿಯಲಾರದು. ಬುದ್ಧಿಮಾಂದ್ಯ ಮಗುವಿನ ಕಿವಿಯ ಮೇಲೆ ಇತರರು ಆಡುವ ಮಾತುಗಳು ಬೀಳುತ್ತಿದ್ದರೂ ತನ್ನ ಕುಂಠಿತ ಬೌದ್ಧಿಕ, ಮಾನಸಿಕ ಬೆಳವಣಿಗೆಯಿಂದಾಗಿ ಇತರರೊಡನೆ ಸಂಪರ್ಕವನ್ನೇರ್ಪಡಿಸಿಕೊಳ್ಳಲು, ಮಾತನ್ನು ಕಲಿಯಲಾಗದು ಮತ್ತು ಈ ಮಗುವು ಬೆಳವಣಿಗೆಯ ಎಲ್ಲಾ ಪ್ರಕಾರಗಳಲ್ಲೂ ತನ್ನ ವಯಸ್ಸಿನ ಇತರ ಮಕ್ಕಳಿಗಿಂತ ಕಡಿಮೆ ಕೌಶಲ್ಯವನ್ನು ತೋರಿಸುತ್ತದೆ. ದೈಹಿಕ ನ್ಯೂನ್ಯತೆಯನ್ನು ಹೊಂದಿರುವ ಮಗುವಿನ ಮುಖ್ಯ ತೊಂದರೆಯೆಂದರೆ, ಓಡಾಟ ಅಥವಾ ಚಲನೆ. ಈ ಮಗುವಿನ ಬುದ್ಧಿಶಕ್ತಿ ಮಟ್ಟವು ಸಾಕಷ್ಟಿದ್ದರೂ

[1] *ಉಪನ್ಯಾಸಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–06*

ತಾನಾಗಿಯೇ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವುದು ಅಸಾಧ್ಯವಾದ್ದರಿಂದ ಶೈಕ್ಷಣಿಕವಾಗಿ ಹಿಂದುಳಿಯುತ್ತದೆ. ಕಲಿಕೆಯಲ್ಲಿ ದೋಷವನ್ನು ಹೊಂದಿರುವ ಮಗುವಿನಲ್ಲಿ ಕಲಿಕೆಯುವಿಕೆಯ ತೊಂದರೆಯಿರುತ್ತದೆ. ಅಂದರೆ ಕಲಿಯುವಿಕೆಯು ಶ್ರವಣ ದೋಷದಿಂದಾಗಲೀ, ದೃಷ್ಟಿ ದೋಷದಿಂದಾಗಲೀ ಅಥವಾ ದೈಹಿಕ ತೊಂದರೆಯಿಂದಾಗಲೀ ಉದ್ಭವಿಸಿದುದಲ್ಲ. ಬೇರೆಯವರು ಆಡಿದ ಮಾತನ್ನು ಅರ್ಥ ಮಾಡಿಕೊಳ್ಳಲು ಅಥವಾ ಮುದ್ರಿತ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಬೇಕಾದ ಮಾನಸಿಕ ಬೆಳವಣಿಗೆಯು ಈ ಮಗುವಿನಲ್ಲಿರುವುದಿಲ್ಲ.

ಈ ಎಲ್ಲಾ ಮಕ್ಕಳಲ್ಲಿಯೂ ತಮ್ಮ ವಯಸ್ಸಿನ ಇತರ ಮಕ್ಕಳಲ್ಲಿ ಕಂಡುಬರುವ ಅನುಭವ ಕೊರತೆಯನ್ನು ಕಾಣುತ್ತೇವೆ. ಈ ಮಕ್ಕಳು ತಮ್ಮ ಅನಿಸಿಕೆಯನ್ನು, ತಮ್ಮ ಆಲೋಚನೆಯನ್ನು, ಭಾವನೆಗಳನ್ನು, ಅಭಿಪ್ರಾಯಗಳನ್ನು ತಮ್ಮ ಪೋಷಕರಲ್ಲಿ, ಒಡಹುಟ್ಟಿದವರಲ್ಲಿ, ಒಡನಾಡಿಗಳಲ್ಲಿ ಸುಲಭವಾಗಿ ಹಂಚಿಕೊಳ್ಳಲಾರರು. ಆದರೆ ಪರಿಸ್ಥಿತಿ ಹೀಗಿದೆಯೆಂದು ಪೋಷಕರು ಹತಾಶರಾಗಿ ಕೈಚೆಲ್ಲಿ ಕುಳಿತುಕೊಳ್ಳುವ ಕಾರಣವಿಲ್ಲ. ಈ ಮಕ್ಕಳ ಬಗ್ಗೆ ಶೈಕ್ಷಣಿಕ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಬೆಳವಣಿಗೆಗಳಾಗುತ್ತಿವೆ, ಅಧ್ಯಯನಗಳಾಗುತ್ತಿವೆ. ಈ ಮಕ್ಕಳನ್ನು ಸಾಮಾಜಿಕ ಸ್ಥರಗಳಲ್ಲಿ ಒಂದುಗೂಡಿಸುವ ಪ್ರಯತ್ನಗಳು ಸಂಘಸಂಸ್ಥೆಗಳಿಂದ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುವವರಿಂದ ಆಗುತ್ತಿದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿಯು ***"ಪ್ರತಿಯೊಬ್ಬರಿಗೂ ಶಿಕ್ಷಣ"*** ಎಂಬ ಶಿರೋನಾಮೆಯಡಿ ವಿಶೇಷಚೇತನ ಮಕ್ಕಳಿಗೆ ಸಮಗ್ರ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಎಲ್ಲಾ ಗುಂಪಿನ ಮಕ್ಕಳಿಗೂ ಸಮಾನ ಶಿಕ್ಷಣದ ಅವಕಾಶ ದೊರಕಿಸಬೇಕು. ಅವರ ಬೌದ್ಧಿಕ ಬೆಳವಣಿಗೆ ಪೂರ್ಣ ಮಟ್ಟದಲ್ಲಿ ಆಗಬೇಕು ಎಂಬ ದೃಷ್ಟಿಯಿಂದ ರಾಷ್ಟ್ರಾದ್ಯಂತ ಈ ನೀತಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಸಮನ್ವಯ ಶಿಕ್ಷಣದ ತತ್ವವೆಂದರೆ, ವಿಶೇಷಚೇತನ ಮಕ್ಕಳು ಸಾಧಾರಣ ಮಕ್ಕಳೊಡನೆ ಬೆರೆತು ಅವರ ಕಾರ್ಯಕಲಾಪಗಳಲ್ಲಿ ಭಾಗಿಯಾಗಿ ಅವರಂತೆಯೇ ಶಿಕ್ಷಣವನ್ನು ಪಡೆದು, ಸಮಾಜವನ್ನು ಧೈರ್ಯ, ಆತ್ಮವಿಶ್ವಾಸದಿಂದ ಎದುರಿಸುವಂತೆ ಆಗಬೇಕು. ಇವರ ಮಾನಸಿಕ, ದೈಹಿಕ, ಸಾಮಾಜಿಕ, ಬೌದ್ಧಿಕ ಬೆಳವಣಿಗೆ ಕನಿಷ್ಠ ಅಡಚಣೆಯುಂಟು ಮಾಡುವಂತಹ ವಾತಾವರಣದಲ್ಲಿ ಆಗಬೇಕು. ಈ ಮಕ್ಕಳ ಮತ್ತು ಸಾಮಾನ್ಯ ಮಕ್ಕಳನ ನಡುವಿನ ಮಾನಸಿಕ, ದೈಹಿಕ, ಸಾಮಾಜಿಕ ಅಂತರ ಕಡಿಮೆ ಆಗಬೇಕು.

ಎಲ್ಲಾ ಪೋಷಕರಿಗೂ ಮಕ್ಕಳ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು. ಮಕ್ಕಳಲ್ಲಿನ ದೋಷ ನಿವಾರಣಾ ಮತ್ತು ನಿಯಂತ್ರಣ ಕ್ರಮವು ಅವರ ಸಮಸ್ಯೆಗಳನ್ನು ಪತ್ತೆ ಹಚ್ಚುವುದರಿಂದ ಆಗುತ್ತದೆ. ಈ ಅರಿವು ಪೋಷಕರಲ್ಲಿ ಜಾಗೃತವಾಗಬೇಕಾದರೆ ಅವರಿಗೆ ಸರಿಯಾದ ಮಾರ್ಗದರ್ಶನ ತಿಳುವಳಿಕೆಯ ಅಗತ್ಯವಿರುತ್ತದೆ. ಈ ಅಗತ್ಯವನ್ನು ಪೂರೈಸುವ ಹೊಣೆ ಶಿಕ್ಷಕರದ್ದಾಗಿರುತ್ತದೆ.

**ಬುದ್ಧಿಮಾಂದ್ಯತೆ ಅರ್ಥ**

ಯಾರ ಬುದ್ಧಿಯ ಮಟ್ಟ ಜನಸಾಮಾನ್ಯರ ಬುದ್ಧಿಯ ಮಟ್ಟಕ್ಕಿಂತ ಕಡಿಮೆಯಾಗಿರುತ್ತದೋ ಅವರನ್ನು ಬುದ್ಧಿ ಮಾಂದ್ಯರು ಎನ್ನುತ್ತಾರೆ. ಈ ಸ್ಥಿತಿಯನ್ನು 'ಬುದ್ಧಿಮಾಂದ್ಯತೆ' ಎನ್ನುತ್ತಾರೆ. ಬುದ್ಧಿಮಾಂಧ್ಯತೆಗೆ

ದುರ್ಬಲಚಿತ್ತ, ಮಂಕುತನ, ಪೆದ್ದುತನ ಎಂದು ಕರೆಯುತ್ತಾರೆ. ಇವೆಲ್ಲವೂ ಸಾಮಾನ್ಯವಾಗಿ ಒಂದೇ ಅರ್ಥವನ್ನು ಕೊಡುತ್ತದೆ. ಒಟ್ಟಾರೆಯಾಗಿ ಬೌದ್ಧಿಕ ಮತ್ತು ಸಾಮಾಜಿಕ ಅಸಮರ್ಥತೆಯಿಂದ ಕೂಡಿರುತ್ತದೆ.

ಯಾವುದೇ ಕಾರಣದಿಂದ ಮೆದುಳಿನ ಬೆಳವಣಿಗೆ ಅಸಮರ್ಪಕವಾದರೆ, ಮೆದುಳು ತನ್ನ ಪೂರ್ಣಗಾತ್ರ ಮತ್ತು ಸಾಮರ್ಥ್ಯಕ್ಕೆ ಬೆಳೆಯದೇ ಹೋದರೆ, ಅಥವಾ ಬೆಳೆಯುತ್ತಿರುವ ಮೆದುಳಿಗೆ ಪ್ರಾರಂಭದಲ್ಲೇ ಹಾನಿಯುಂಟಾಗಿ ಅದು ಭಾಗಶಃ ನಿಷ್ಕ್ರಿಯಗೊಂಡರೆ ಬುದ್ಧಿಮಾಂದ್ಯತೆ ಕಾಣಿಸಿಕೊಳ್ಳುತ್ತದೆ.

**ಬುದ್ಧಿಮಾಂದ್ಯತೆಯ ವರ್ಗೀಕರಣ**

ಬುದ್ಧಿಮಾಂದ್ಯರನ್ನು 5 ವರ್ಗಗಳಾಗಿ ವಿಂಗಡಿಸಲಾಗಿದೆ.

| | | |
|---|---|---|
| 1. | ನಿಧಾನಗತಿಯಲ್ಲಿ ಕಲಿಯುವವರು (Slow learners) | IQ - 75 ರಿಂದ 90 ರವರೆಗೆ |
| 2. | ಅಲ್ಪ ಪ್ರಮಾಣದ ಬುದ್ಧಿಮಾಂಧ್ಯತೆ ಉಳ್ಳವರು (Mildly retarded) (Educable mentally retarded) | IQ -60 ರಿಂದ 70 ರವರೆಗೆ |
| 3. | ಸಾಧಾರಣ ಪ್ರಮಾಣ ಬುದ್ಧಿಮಾಂಧ್ಯತೆ ಉಳ್ಳವರು(Moderately retarded trainable mentally retarded) | IQ - 35 ರಿಂದ 60 ರವರೆಗೆ |
| 4. | ಅಧಿಕ ಪ್ರಮಾಣದ ಬುದ್ಧಿಮಾಂಧ್ಯತೆಯುಳ್ಳವರು(Severely retarded) | IQ - 20 ರಿಂದ 35 ರವರೆಗೆ |
| 5. | ಅತ್ಯಧಿಕ ಪ್ರಮಾಣದ ಬುದ್ಧಿಮಾಂಧ್ಯತೆ ಉಳ್ಳವರು(Profoundly retarded) | IQ - 20 ಕ್ಕಿಂತ ಕಡಿಮೆ ಇರುವವರು |

**ವ್ಯಾಖ್ಯಾನಗಳು**

**ಎಎಎಂಆರ್**ರವರ ಪ್ರಕಾರ: "ಬೆಳವಣಿಗೆ ಹಂತದಲ್ಲಿ ಮಗುವಿನ ವಿಲಕ್ಷಣ ಗುಣಗಳು ಮತ್ತು ಅಸಮಾನ ಬುದ್ಧಿವಂತಿಕೆ ಹೊಂದಿದ್ದು, ಸಮಾಜದಲ್ಲಿ ಸಹಜವಾಗಿ ಬಾಳದವರನ್ನು ಬುದ್ಧಿಮಾಂದ್ಯರು" ಎಂದು ಕರೆಯುತ್ತಾರೆ. **ನಾಬ್ಲಾಚ್**ರವರು "ಅಪಕ್ವಜಾತ ಶಿಶುವಿನ ಜನನದಿಂದ ಉಂಟಾಗುವ ಮಗುವಿನ ಮಂದತೆಯೇ ಬುದ್ಧಿಮಾಂದ್ಯತೆ" ಎಂದು ತಿಳಿಸಿದ್ದಾರೆ.

**ಬುದ್ಧಿಮಾಂದ್ಯತೆಯ ಲಕ್ಷಣಗಳು**

ಬುದ್ಧಿಮಾಂದ್ಯ ಮಕ್ಕಳನ್ನು ಕೇವಲ 'ದೈಹಿಕ ಲಕ್ಷಣ'ಗಳಿಂದ ಮಾತ್ರವಲ್ಲ, 'ಮಾನಸಿಕ ಲಕ್ಷಣ'ಗಳಿಂದಲೂ ಗುರುತಿಸಬಹುದು. ಸಣ್ಣ ತಲೆ, ಚಪ್ಪಟೆ ಮೂಗು, ಓರೆಯಾದ ಸಣ್ಣ ಕಣ್ಣುಗಳು, ದೊಡ್ಡ ಮತ್ತು ಕೆಳಮಟ್ಟದಲ್ಲಿರುವ ಕಿವಿಗಳು, ಪುಟ್ಟಬಾಯಿಯಲ್ಲಿ ದೊಡ್ಡನಾಲಿಗೆ, ಜೊಲ್ಲು ಸುರಿಸುವ ಬಾಯಿ, ಗಿಡ್ಡ ಕೈಕಾಲುಗಳು, ಕುಬ್ಜ ದೇಹ ಇತ್ಯಾದಿ ಲಕ್ಷಣಗಳು ಕಂಡುಬರುತ್ತವೆ.

ಬೆಳವಣಿಗೆಯ ಮೈಲಿಗಲ್ಲುಗಳು ನಿಧಾನವಾಗುವುದು, ಸಾಮಾನ್ಯ ಮಗುವಿಗೆ 3 ತಿಂಗಳಿಗೆ ಕತ್ತು ನಿಲ್ಲುತ್ತದೆ. 6 ತಿಂಗಳಿಗೆ ಮಗು ಕುಳಿತುಕೊಳ್ಳುತ್ತದೆ, 9 ತಿಂಗಳಿಗೆ ನಿಲ್ಲುತ್ತದೆ. ಒಂದು ವರ್ಷಕ್ಕೆ ತಪ್ಪು ಹೆಜ್ಜೆ ಹಾಕಿ ಓಡಾಡುತ್ತದೆ. 1½ ವರ್ಷಕ್ಕೆ ಮಾತನಾಡಲು ಪ್ರಾರಂಭಿಸುತ್ತದೆ. ಈ ಮುಖ್ಯ ಮೈಲಿಗಲ್ಲುಗಳು 2 ತಿಂಗಳು

ಅಥವಾ ಅದಕ್ಕಿಂತಲೂ ವಿಳಂಬವಾದರೆ ಬುದ್ಧಿಮಾಂದ್ಯತೆ ಎಂದು ತಿಳಿಯಬಹುದು. ಮಗು ತೆವಳುವುದು, ಬೋರಲು ಬೀಳುವುದು, ಕುಳಿತುಕೊಳ್ಳುವುದು, ನಿಲ್ಲುವುದು, ಓಡಾಡುವುದು, ತಡವಾದರೆ ಬುದ್ಧಿಮಾಂದ್ಯತೆಯ ಸೂಚನೆಗಳೆಂದು ಊಹಿಸಬಹುದು. ಯಾವ ಚಟುವಟಿಕೆ ಇಲ್ಲದೆ ಸದಾ ಮಂಕಾಗಿರುವುದು, ಮಲಗಿದ್ದಲ್ಲೇ ಮಲಗಿರುವುದು, ಇದ್ದಲ್ಲೇ ಇರುವುದು, ಯಾವ ಪ್ರಚೋದನೆಗೂ ಸ್ಪಂಧಿಸದಿರುವುದು, ಇತರ ಮಕ್ಕಳೊಂದಿಗೆ ಬೆರೆಯದಿರುವುದು ಇತ್ಯಾದಿ ಅಂಶಗಳು ಕೂಡ ಬುದ್ಧಿಮಾಂದ್ಯತೆಯ ಲಕ್ಷಣಗಳಾಗಿರುತ್ತದೆ ಇದರೊಂದಿಗೆ 3 ವರ್ಷವಾದರೂ ಮಲ ಮೂತ್ರ ವಿಸರ್ಜನೆಯ ಮೇಲೆ ಹತೋಟಿ ಇರದಿದ್ದರೆ, 4–5 ವರ್ಷವಾದರೂ ಹಾಸಿಗೆ ಬಟ್ಟೆಯಲ್ಲೇ ಮಲ ಮೂತ್ರ ಮಾಡುವುದು, ಮಾಡಿಯೂ ಕೂಡ ಅದನ್ನು ಗಮನಿಸದಿರುವುದು ಕೂಡ ಪ್ರಮುಖ ಲಕ್ಷಣವಾಗಿರುತ್ತದೆ.

ದೈನಂದಿನ ಚಟುವಟಿಕೆಗಳಾದ ಆಹಾರ ಸೇವನೆ, ಸ್ವಚ್ಛತೆಯ ಉಡುಪು ಧರಿಸುವುದು, ಬಟ್ಟೆ ತೆಗೆಯುವುದು ಮತ್ತು ಹಾಕಿಕೊಳ್ಳುವುದನ್ನು ಕಲಿಯದೇ ಇರುವುದು. ಎಲ್ಲದ್ದಕ್ಕೂ ತಂದೆ–ತಾಯಿಯನ್ನು ಅವಲಂಬಿಸುವುದು, ಸಾಮಾನ್ಯ ಅಪಾಯಗಳನ್ನು ನಿವಾರಿಸಿಕೊಳ್ಳಲು ಕಲಿಯದಿರುವುದು, ವಿಪರೀತ ತೀಟೆ, ಒಂದು ನಿಮಿಷಕೂಡ ಸುಮ್ಮನಿರದೇ ಸದಾ ಒಂದಲ್ಲ ಒಂದು ಬೇಡದ ಚಟುವಟಿಕೆಗಳನ್ನು ಮಾಡುವುದು, ಏಕಾಗ್ರತೆ ಇಲ್ಲದಿರುವುದು, ಮನಸ್ಸು ಅತಿ ಚಂಚಲವಾಗಿ ಒಂದೆರಡು ನಿಮಿಷಗಳ ಕಾಲವೂ ಒಂದು ವಸ್ತು ಅಥವಾ ಚಟುವಟಿಕೆಯಲ್ಲಿ ಗಮನವಿಡಲು ಆಗದಿರುವುದು, ಕಲಿತದ್ದನ್ನು ಬಹು ಬೇಗ ಮರೆಯುವುದು. ಸಾಮಾನ್ಯ ವಸ್ತುಗಳನ್ನು ಗುರುತಿಸಲು ವಿಫಲವಾಗುವುದು, ಶಾಲೆಯಲ್ಲಿ ನಿಧಾನ ಕಲಿಕೆ ಅಥವಾ ಏನನ್ನೂ ಕಲಿಯದೇ ಇರುವುದು, ಪದೇ ಪದೇ ಫಿಟ್ಸ್ ಬರುವುದು ಇತ್ಯಾದಿ ಲಕ್ಷಣಗಳು ಕಾಣಿಸಿಕೊಳ್ಳುತ್ತದೆ.

**ಬುದ್ಧಿಮಾಂದ್ಯತೆಗೆ ಕಾರಣಗಳು**

ಬುದ್ಧಿಮಾಂಧ್ಯತೆಗೆ ಕಾರಣಗಳನ್ನು 3 ರೀತಿಯಲ್ಲಿ ವಿಂಗಡಿಸಬಹುದು ಅವುಗಳೆಂದರೆ ಜನನ ಪೂರ್ವ ಕಾರಣಗಳು, ಜನನ ಸಮಯದ ಕಾರಣಗಳು, ಜನನಾ ನಂತರದ ಕಾರಣಗಳು. ಪೋಷಕರಿಂದ ಅನುವಂಶೀಯವಾಗಿ ಸಾಗಿಸಲ್ಪಟ್ಟ ಉತ್ಪತ್ತಿ ಮೂಲಕ್ಕೆ ಸಂಬಂಧಪಟ್ಟ ಜೈವಿಕ, ರಾಸಾಯನಿಕ ಕ್ರಿಯೆಯಲ್ಲಿ ಆಗುವ ಅವ್ಯವಸ್ಥೆ, ವರ್ಣ ತಂತುಗಳಲ್ಲಿ ದೋಷ ಅಂದರೆ ತಂದೆಯ ವೀರ್ಯಾಣುವಿನಿಂದ ಬಂದ 23 ವರ್ಣತಂತುಗಳು, ತಾಯಿಯ ಅಂಡಾಣುವಿನಿಂದ ಬಂದ 23 ವರ್ಣತಂತುಗಳ ಜೊತೆಸೇರಿ ಮಗುವಿಗೆ ಪ್ರತೀ ಜೀವಕೋಶದಲ್ಲಿ 23 ಜೊತೆ ವರ್ಣತಂತುಗಳಿರುತ್ತವೆ. ಈ 23 ಜೊತೆ ವರ್ಣತಂತುಗಳ ಮೇಲೆ ಒಟ್ಟು ಸುಮಾರು 1 ಲಕ್ಷ ಜನಿಕ (ಜೀನ್ಸ್)ಗಳಿರುತ್ತವೆ. ಈ ಜನಿಕಗಳು ಅನುವಂಶಿಕವಾಗಿ ತಂದೆ, ತಾಯಿ ಮತ್ತು ಅವರ ಕುಟುಂಬದ ಜನರ ಗುಣಲಕ್ಷಣಗಳನ್ನು ಮಗುವಿಗೆ ತರುತ್ತದೆ. ಪ್ರತಿಯೊಂದು ಅಂಗ ಹೇಗಿರಬೇಕು, ಬಣ್ಣ, ಎತ್ತರ ಹೇಗಿರಬೇಕು, ಮಗುವಿನ ವ್ಯಕ್ತಿತ್ವ ಎಂತಿರಬೇಕು ಎಂಬುದನ್ನು ಈ ಜನಿಕಗಳು ನಿರ್ಧರಿಸುತ್ತವೆ. ಈ ವರ್ಣತಂತುಗಳಲ್ಲಿ ಏನಾದರೂ ನ್ಯೂನತೆ ಇದ್ದರೆ, ಬುದ್ಧಿಮಾಂಧ್ಯತೆ ಕಾಣಿಸಿಕೊಳ್ಳುತ್ತದೆ.

ಗರ್ಭಿಣಿಯ ಅಪೌಷ್ಟಿಕತೆಯು ಕೂಡ ಕಾರಣವಾಗುತ್ತದೆ ಏಕೆಂದರೆ ಗರ್ಭಸ್ಥ ಶಿಶುವಿನ ಮೆದುಳಿನ ಬೆಳವಣಿಗೆಗೆ ಪ್ರೊಟೀನ್, ಜೀವಸತ್ವಗಳು, ಖನಿಜ ಲವಣಾಂಶಗಳು ಬೇಕು, ತೀವ್ರ ಬಡತನ, ಮೂಢನಂಬಿಕೆಗಳಿಂದ ಸರಿಯಾದ ಆಹಾರ ಪದಾರ್ಥಗಳನ್ನು ಸೇವಿಸದಿರುವುದು ಅಥವಾ ಗರ್ಭಿಣಿಗೆ

ಪದೇಪದೇ ವಾಂತಿ, ಬೇದಿ, ಅಜೀರ್ಣಗಳಿಂದಾಗಿ ಆಕೆ ಅಪೌಷ್ಟಿಕತೆಗೆ ತುತ್ತಾಗಬಹುದು. ಹೀಗೆ ಪ್ರೋಟೀನ್ ಕೊರತೆ, ಕಬ್ಬಿಣಾಂಶದ ಕೊರತೆ, ಅಯೋಡಿನ್ ಕೊರತೆಯಿಂದ ಮಗು ಬುದ್ಧಿಮಾಂದ್ಯಮಗುವಾಗಿ ಹುಟ್ಟುತ್ತದೆ.

ಗರ್ಭಧಾರಣೆಯ ಅವಧಿಯಲ್ಲಿ ಸ್ತ್ರೀ ಮಾದಕ ವಸ್ತುಗಳನ್ನು, ಔಷಧಿಗಳನ್ನು ಸೇವಿಸುವುದರಿಂದಲೂ ಮಗುವಿನ ಮೆದುಳಿಗೆ ಹಾನಿಯುಂಟಾಗುತ್ತದೆ. ಅತಿಯಾದ ಧೂಮಪಾನ, ಮದ್ಯಪಾನೀಯಗಳ ಸೇವನೆ, ಅಫೀಮು ಅಥವಾ ಆ ಜಾತಿಗೆ ಸೇರಿದ ಮಾದಕ ವಸ್ತುಗಳ ಬಳಕೆ, ವೈದ್ಯರನ್ನು ಕೇಳದೆ ಜೀವಿರೋಧಕ (ಆಂಟಿಬಯೋಟಿಕ್ಸ್)ಗಳನ್ನು ಮತ್ತು ಹಾರ್ಮೋನು ಮಾತ್ರೆಗಳನ್ನು ಸೇವಿಸುವುದು ಅಪಾಯಕಾರಿ. ಈ ರೀತಿಯ ಮಾತ್ರೆಗಳು ಮತ್ತು ಮಾದಕ ವಸ್ತುಗಳನ್ನು ಸೇವಿಸುವುದರಿಂದ ಮಗುವಿನ ಮೆದುಳಿಗೆ ಹಾನಿಯುಂಟಾಗಿ ಬುದ್ಧಿಮಾಂದ್ಯಮಗು ಹುಟ್ಟುತ್ತದೆ. ಗರ್ಭಧಾರಣೆಯ ಅವಧಿಯಲ್ಲಿ ಸ್ತ್ರೀ ಎಕ್ಸ್‌ರೇ ವಿಕಿರಣಗಳಿಗೆ (ರೇಡಿಯೇಷನ್) ತನ್ನ ದೇಹವನ್ನು ಒಡ್ಡಬಾರದು.ಈ ವಿಕಿರಣಗಳು ಶಿಶುವಿಗೆ ಮಾರಕವಾಗಿ ಬುದ್ಧಿಮಾಂದ್ಯಮಗು ಹುಟ್ಟಬಹುದು. ಇದರೊಂದಿಗೆ ಗರ್ಭಿಣಿ ಮಹಿಳೆಯು ತಾನೇ ಸ್ವ–ಇಚ್ಚೆಯಿಂದ ಗರ್ಭಪಾತಕ್ಕೆ ಪ್ರಯತ್ನಿಸಿ ಅಥವಾ ಸಹಜವಾಗಿ ಗರ್ಭಪಾತದ ಲಕ್ಷಣಗಳು ಕಾಣಿಸಿಕೊಂಡು, ಗರ್ಭ ಮುಂದುವರಿದರೆ ಶಿಶುವಿನ ಮೆದುಳಿಗೆ ಹಾನಿಯುಂಟಾಗಿ ಬುದ್ಧಿಮಾಂದ್ಯಮಗು ಹುಟ್ಟಬಹುದು. ಅವಧಿಗೆ ಮುಂಚಿನ ಹೆರಿಗೆ (ಪ್ರೀ ಮೆಚ್ಯೂರ್ ಡೆಲಿವರಿ) ಕೂಡ ಮಕ್ಕಳಲ್ಲಿ ಬುದ್ಧಿ ಮಾಂದ್ಯತೆಗೆ ಕಾರಣವಾಗಬಹುದು ಅಂದರೆ 280 ದಿನಗಳು ತುಂಬದೇ, 7 ಅಥವಾ 8ನೇ ತಿಂಗಳಿಗೆ ಹೆರಿಗೆಯಾದರೆ, ಹುಟ್ಟಿದ ಮಗುವಿನ ಮೆದುಳು ಮಾಮೂಲಿಗಿಂತ ಹೆಚ್ಚು ಅಪೂರ್ಣವಾಗಿರುತ್ತದೆ. ಗರ್ಭಧಾರಣೆಯ ಅವಧಿಗೆ ಹೋಲಿಸಿದರೆ ಮೈ ತೂಕ ಕಡಿಮೆ ಇರುವ ಮಗುವಿನ ಮೆದುಳು ಚಿಕ್ಕದಿರುತ್ತದೆ. ಇಂತಹ ಮಕ್ಕಳಲ್ಲಿ ಬುದ್ಧಿಮಾಂಧ್ಯತೆ ಸಂಭವ ಹೆಚ್ಚುತ್ತದೆ.  ಇವುಗಳಲ್ಲದೇ ತಂದೆ–ತಾಯಿಯ ರಕ್ತದ ಗುಂಪಿನಲ್ಲಿ ಹೊಂದಾಣಿಕೆ ಇಲ್ಲದಿರುವುದು, ತೀರ ಹತ್ತಿರದ ಸಂಬಂಧಿಗಳಲ್ಲಿ ವಿವಾಹವಾಗುವುದು, ಗರ್ಭಿಣಿ ಸ್ತ್ರೀಯು ಸಿಡುಬು, ಫ್ಲ್ಯೂ ಮತ್ತು ಸೋಂಕುರೋಗ, ಕಾಲುಗಳ ಊತ ಅಥವಾ ಇನ್ನಾವುದೇ ದೊಡ್ಡರೋಗಗಳಿಂದ ಬಳಲುತ್ತಿದ್ದರೆ, ಗರ್ಭಸ್ತ ಮಗುವಿನ ಮೆದುಳಿಗೆ ಹಾನಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ.

ಜನನ ಪೂರ್ವದ ಕಾರಣದ ಜೊತೆಗೆ ಜನನ ಸಮಯದ ಕಾರಣಗಳು ಕೂಡ ಮಕ್ಕಳ ಮೆದುಳಿನ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅವಧಿ ತುಂಬುವ ಮೊದಲೇ ಜನನವಾಗುವುದು, ವಿಳಂಬ ಅಥವಾ ಕಷ್ಟಕರವಾದ ಹೆರಿಗೆ, ಜನನ ಸಮಯದಲ್ಲಿ ಉಂಟಾಗುವ ಆಮ್ಲಜನಕದ ಕೊರತೆ, ಹೆರಿಗೆಗೆ ಮೊದಲು ತಾಯಿಗೆ ಕೊಡುವ ಉಪಶಾಮಕಗಳು, ಹೆರಿಗೆ ಸಮಯದಲ್ಲಿ ಉಪಯೋಗಿಸುವ ಸಲಕರಣೆಗಳಿಂದ ಮೆದುಳಿಗೆ ಆಗುವ ಹಾನಿ, ಗರ್ಭಿಣಿಯ ದೇಹ ಬಹಳ ಕುಳ್ಳಗಿದ್ದರೆ, ಜನನದ ಸಮಯದಲ್ಲಿ ಮಗುವಿನ ತಲೆಯ ಬದಲು ಕೈಯೋ, ಕಾಲೋ ಅಥವಾ ಕರುಳು ಬಳ್ಳಿಯೋ ಮೊದಲು ಹೊರಬಂದರೆ ಹಾಗೂ ಮಗು ಅಸಹಜವಾಗಿ ದಪ್ಪಗಿದ್ದರೆ, ಹೆರಿಗೆ ಸಮಯದಲ್ಲಿ ಮಗುವಿನ ಮೆದುಳಿನಲ್ಲಿ ರಕ್ತಸ್ರಾವ, ಮಗುವಿನ ಮೆದುಳಿಗೆ ಆಮ್ಲಜನಕದ ಕೊರತೆ, ತಾಯಿಯ ರಕ್ತದ ಗುಂಪು ಆರ್.ಹೆಚ್.ನೆಗೆಟಿವ್ ಇದ್ದು, ಗರ್ಭಸ್ತ ಶಿಶುವಿನ ರಕ್ತದ ಗುಂಪು ಆರ್.ಹೆಚ್.ಪಾಸಿಟಿವ್ ಇದ್ದರೆ, ತೀವ್ರ ರಕ್ತ ಪ್ರತಿಕ್ರಿಯೆಯಿಂದಾಗಿ ಮಗುವಿನ ಮೆದುಳಿಗೆ ಹಾನಿಯುಂಟಾಗುತ್ತದೆ ಮತ್ತು ರಕ್ತದ ಗುಂಪು ಎ, ಬಿ. ಒ ಹೊಂದಾಣಿಕೆ ಇಲ್ಲದಿದ್ದರೆ ಮಗುವಿನ ಮೆದುಳು ಹಾನಿಗೆ ಕಾರಣವಾಗುತ್ತದೆ ಈ ಅಂಶಗಳ ನಂತರ ಜನನ ನಂತರದ ಕಾರಣಗಳು ಕೂಡ ಮಕ್ಕಳ ಬೌದ್ಧಿಕ

ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಜನನ ನಂತರ ಮಗುವಿನ ತಲೆಗೆ ಪೆಟ್ಟು ಬೀಳುವುದು, ಮಗುವಿನಲ್ಲಿರುವ ಅಪೌಷ್ಠಿಕತೆ, ಜಾಂಡೀಸ್, ದೀರ್ಘಕಾಲಾವದಿಯ ಜ್ವರ, ಅತಿಸಾರ, ಮೆದುಳು ಜ್ವರಗಳಿಂದ ಪೀಡಿತರಾಗಿರುವುದು, ವೈರಸ್ ರೋಗಾಣುಗಳಿಂದ ಅಥವಾ ಬ್ಯಾಕ್ಟೀರಿಯಾಗಳಿಂದ ಮೆದುಳು ಅಥವಾ ಮೆದುಳು ಪೊರೆಗೆ ಸೋಂಕು ಉಂಟಾಗಿ ಮಗು ಬುದ್ಧಿಮಾಂದ್ಯತೆಗೆ ಒಳಗಾಗಬಹುದು, ಪ್ರಚೋದನೆಗಳಿಲ್ಲದ ಮಗುವಿನ ಪರಿಸರ, ಹೊರಗಿನ ಪ್ರಪಂಚಕ್ಕೆ ಮಗುವನ್ನು ಬಿಡದೇ ಸೀಮಿತ ಕ್ಷೇತ್ರದಲ್ಲೇ ಇರಿಸುವುದು, ತಂದೆ–ತಾಯಿಗಳ ಉದಾಸೀನಕ್ಕೆ ಒಳಗಾಗಿ ಮಗು ಅನಾಥಾಲಯ, ಬೋರ್ಡಿಂಗ್ ಶಾಲೆಗಳಲ್ಲಿ ಬೆಳೆಯುವುದು ಬುದ್ಧಿಮಾಂದ್ಯತೆಗೆ ಪ್ರಚೋದನೆ ನೀಡುತ್ತದೆ.

**ಬುದ್ಧಿಮಾಂಧ್ಯತೆ ತಡೆಗಟ್ಟುವ ವಿಧಾನಗಳು**

ಗರ್ಭಿಣಿ ಸ್ತ್ರೀಗೆ ಉತ್ತಮ ಪೌಷ್ಟಿಕಾಂಶವುಳ್ಳ ಆಹಾರವನ್ನು ನೀಡಬೇಕು, ಪ್ರಸವಕ್ಕೆ ಮುನ್ನ, ಪ್ರಸವ ಕಾಲದಲ್ಲಿ ಹಾಗೂ ಪ್ರಸವದ ನಂತರ ಮಗುವಿನ ಬಗ್ಗೆ ಸರಿಯಾದ ಕಾಳಜಿ ವಹಿಸಬೇಕು, ಮಗುವಿಗೆ ಚುಚ್ಚುಮದ್ದುಗಳನ್ನು ಹಾಕಿಸಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬೇಕು, ಗರ್ಭಧಾರಣೆಗೆ ಮೊದಲೇ ವೈದ್ಯರಲ್ಲಿ ಸಲಹೆ ಪಡೆದು, ರಕ್ತದ ಗುಂಪಿನ ಬಗ್ಗೆ ಮಾಹಿತಿ ಪಡೆಯಬೇಕು, ಹತ್ತಿರದ ರಕ್ತ ಸಂಬಂಧಿಗಳೊಂದಿಗೆ ವಿವಾಹ ಸಂಬಂಧಗಳನ್ನು ಬೆಳೆಸದೇ ಇರುವುದು ಉತ್ತಮ, ತೀರಾ ತಡವಾಗಿ ಅಂದರೆ, 35 ವರ್ಷದ ನಂತರ ಅಥವಾ 18 ವರ್ಷಕ್ಕೆ ಮುಂಚೆ ಗರ್ಭಧಾರಣೆಯಾಗದಂತೆ ನೋಡಿಕೊಳ್ಳುವುದು. ಗರ್ಭಧಾರಣೆಯಾದ 3 ತಿಂಗಳವರೆಗೆ ಔಷಧಗಳನ್ನು ಆದಷ್ಟು ವರ್ಜಿಸಬೇಕು. ಎಕ್ಸ್–ರೇ ಕಿರಣಗಳಿಂದ ದೂರವಿರುವುದು ಒಳ್ಳೆಯದು, ಪ್ರಸವ ವೇಳೆಯಲ್ಲಿ ತರಬೇತಿ ಪಡೆದ ವೈದ್ಯಾಧಿಕಾರಿಗಳ ಸಹಾಯ ಪಡೆಯಬೇಕು, ಮೊದಲ 5 ತಿಂಗಳು ಮಗುವಿಗೆ ಬಾಟಲಿ ಹಾಲನ್ನು ಕುಡಿಸಬಾರದು, ಮೊದಲನೇ ಮಗು ಬುದ್ಧಿಮಾಂದ್ಯತೆಗೆ ಒಳಗಾಗಿದ್ದರೆ, ಎರಡನೇ ಮಗುವನ್ನು ಪಡೆಯುವ ಮುನ್ನ ದಂಪತಿಗಳು ತಜ್ಞರ ಸಲಹೆ ಪಡೆಯಬೇಕು, ಗರ್ಭಧರಿಸಿರುವ ಅವಧಿಯಲ್ಲಿ ಗರ್ಭಿಣಿಯು ಯಾವುದೇ ರೀತಿಯ ಪೆಟ್ಟು, ಭಾರ ಬೀಳದಂತೆ ನೋಡಿಕೊಳ್ಳಬೇಕು, ಮಗುವಿಗೆ ಸತ್ವಯುತ ಆಹಾರ ನೀಡಬೇಕು, ಬಾಲ್ಯದಲ್ಲಿ ಫಿಟ್ಸ್ ಅಥವಾ ಅಪಸ್ಮಾರ ಇದ್ದರೆ ಸರಿಯಾದ ಔಷದೋಪಚಾರ ಮಾಡಬೇಕು.

**ಬುದ್ಧಿಮಾಂದ್ಯಮಕ್ಕಳ ಪುನಶ್ಚೇತನಕ್ಕಾಗಿ ಸರ್ಕಾರವು ಕೈಗೊಂಡಿರುವ ಕೆಲವು ಕ್ರಮಗಳು**

ವಿಶೇಷ ತರಬೇತಿ ಪಡೆದ ವಿಶೇಷ ಶಿಕ್ಷಕರ ಮೂಲಕ ಬುದ್ಧಿಮಾಂದ್ಯಮಕ್ಕಳಿಗಾಗಿ ವಿಶೇಷ ಶಿಕ್ಷಣ ನೀಡುವುದು, ಹಲವು ಚಟುವಟಿಕೆಗಳನ್ನು ಕೈಗೊಳ್ಳುವುದು, ಕ್ಯಾಂಪ್‌ಗಳನ್ನು ನಡೆಸಿ ತರಬೇತಿ ನೀಡುವುದರ ಜೊತೆಗೆ ಬುದ್ಧಿಮಾಂದ್ಯಮಕ್ಕಳ ಪೋಷಕರಿಗೆ ಪಾಲನೆ–ಪೋಷಣೆಯ ಬಗ್ಗೆ ಅರಿವು ಮೂಡಿಸುವುದು, ಸರ್ಕಾರದ ವತಿಯಿಂದ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ನೀಡುವುದು, ಬುದ್ಧಿಮಾಂದ್ಯಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅವರನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ.

## ಅಧ್ಯಯನದ ಉದ್ದೇಶಗಳು

- ಮೈಸೂರು ನಗರದ ಬುದ್ಧಿಮಾಂದ್ಯ ಮಕ್ಕಳ ಸಂಸ್ಥೆಯ ಪ್ರಾಂಶುಪಾಲರಲ್ಲಿ ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಅಭಿಪ್ರಾಯವನ್ನು ತಿಳಿಯುವುದು.
- ಮೈಸೂರು ನಗರದ ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದ ಕುರಿತು ಪುರುಷ ಮತ್ತು ಮಹಿಳಾ ಶಿಕ್ಷಕರ ನಡುವಿನ ವ್ಯತ್ಯಾಸ ತಿಳಿಯುವುದು.
- ಮೈಸೂರು ನಗರದ ಬುದ್ಧಿಮಾಂದ್ಯ ಮಕ್ಕಳ ಸಂಸ್ಥೆಗೆ ದಾಖಲಾದ ಬುದ್ಧಿಮಾಂದ್ಯ ಮಕ್ಕಳ ಪೋಷಕರಲ್ಲಿ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ಅಭಿಪ್ರಾಯವನ್ನು ತಿಳಿಯುವುದು.

## ಅಧ್ಯಯನದ ಪ್ರಾಕಲ್ಪನೆಗಳು

- ಮೈಸೂರು ನಗರದ ಬುದ್ಧಿಮಾಂದ್ಯ ಮಕ್ಕಳ ಸಂಸ್ಥೆಯ ಪ್ರಾಂಶುಪಾಲರಲ್ಲಿ ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.
- ಮೈಸೂರು ನಗರದ ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದ ಕುರಿತು ಪುರುಷ ಮತ್ತು ಮಹಿಳಾ ಶಿಕ್ಷಕರ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.
- ಮೈಸೂರು ನಗರದ ಬುದ್ಧಿಮಾಂದ್ಯಮಕ್ಕಳ ಸಂಸ್ಥೆಗೆ ದಾಖಲಾದ ಬುದ್ಧಿಮಾಂದ್ಯ ಮಕ್ಕಳ ಪೋಷಕರಲ್ಲಿ ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

## ಫಲಿತಾಂಶ

ಪ್ರಾಕಲ್ಪನೆ 1: ಬುದ್ಧಿಮಾಂದ್ಯಮಕ್ಕಳ ಸಂಸ್ಥೆಯ ಪ್ರಾಂಶುಪಾಲರು/ಮುಖ್ಯಶಿಕ್ಷಕರಲ್ಲಿ ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ತಾಲಿಕೆ 1: ಬುದ್ಧಿಮಾಂದ್ಯಮಕ್ಕಳ ಪ್ರಾಂಶುಪಾಲರು/ಮುಖ್ಯಶಿಕ್ಷಕರು ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯ ವಿಶ್ಲೇಷಣೆಯ ಫಲಿತಾಂಶವನ್ನು ತೋರಿಸುವ ತಾಲಿಕೆ.**

| ಚಲಕ | ಲಿಂಗ | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | 't' ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|---|
| ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳು | ಪುರುಷರು | 2 | 58.00 | 3.59 | 0.42 | .584 |
| | ಮಹಿಳೆಯರು | 4 | 56.75 | 2.82 | | |

ತಾಲಿಕೆ 1 ರ ಪ್ರಕಾರ ಪಡೆದ 't' ಮೌಲ್ಯವು 0.42 ಆಗಿದ್ದು 't' ಪಟ್ಟಿಯ ಮೌಲ್ಯವು 0.05 ಲಕ್ಷ್ಯಾರ್ಹತೆ ಮಟ್ಟದಲ್ಲಿ 1.96 ಆಗಿರುತ್ತದೆ. ಪಡೆದಂತಹ 't' ಮೌಲ್ಯವು 't' ಪಟ್ಟಿ ಮೌಲ್ಯಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಪ್ರಾಂಶುಪಾಲರು/ಮುಖ್ಯಶಿಕ್ಷಕರು ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ. ಆದ್ದರಿಂದ ಈ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ಪ್ರಾಕಲ್ಪನೆ 2: ಮೈಸೂರು ನಗರದ ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದ ಕುರಿತು ಪುರುಷ ಮತ್ತು ಮಹಿಳಾ ಶಿಕ್ಷಕರ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ತಾಲಿಕೆ–2 ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದ ಕುರಿತು ಪುರುಷ ಮತ್ತು ಮಹಿಳಾ ಶಿಕ್ಷಕರ ಅಭಿಪ್ರಾಯ ವಿಶ್ಲೇಷಣೆಯ ಫಲಿತಾಂಶವನ್ನು ತೋರಿಸುವ ತಾಲಿಕೆ.**

| ಚಲಕ | ಲಿಂಗ | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | 't' ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|---|
| ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳು | ಪುರುಷರು | 5 | 70.00 | 4.95 | 0.54 | .847 |
| | ಮಹಿಳೆಯರು | 44 | 68.75 | 4.76 | | |

ತಾಲಿಕೆ 2 ರ ಪ್ರಕಾರ ಪಡೆದ 't' ಮೌಲ್ಯವು 0.54 ಆಗಿದ್ದು 't' ಪಟ್ಟಿಯ ಮೌಲ್ಯವು 0.05 ಲಕ್ಷ್ಯಾರ್ಹತೆ ಮಟ್ಟದಲ್ಲಿ 1.96 ಆಗಿರುತ್ತದೆ. ಪಡೆದಂತಹ 't' ಮೌಲ್ಯವು 't' ಪಟ್ಟಿ ಮೌಲ್ಯಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆತನ್ನು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದ ಕುರಿತು ಪುರುಷ ಮತ್ತು ಮಹಿಳಾ ಶಿಕ್ಷಕರ ಅಭಿಪ್ರಾಯದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ. ಆದ್ದರಿಂದ ಈ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

ಪ್ರಾಕಲ್ಪನೆ 3: ಬುದ್ಧಿಮಾಂದ್ಯಮಕ್ಕಳ ಸಂಸ್ಥೆಗೆ ದಾಖಲಾದ ಬುದ್ಧಿಮಾಂದ್ಯ ಮಕ್ಕಳ ಪೋಷಕರಲ್ಲಿ ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ನಡುವೆ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ.

**ತಾಲಿಕೆ 3: ಬುದ್ಧಿಮಾಂದ್ಯಮಕ್ಕಳ ಸಂಸ್ಥೆಗೆ ದಾಖಲಾದ ಬುದ್ಧಿಮಾಂದ್ಯ ಮಕ್ಕಳ ಪೋಷಕರಲ್ಲಿ ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯ ವಿಶ್ಲೇಷಣೆಯ ಫಲಿತಾಂಶವನ್ನು ತೋರಿಸುವ ತಾಲಿಕೆ.**

| ಚಲಕ | ಲಿಂಗ | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | ಟಿ ಮೌಲ್ಯ | ಲಕ್ಷ್ಯಾರ್ಹತೆ |
|---|---|---|---|---|---|---|
| ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳು | ಪುರುಷರು | 2 | 64.72 | 9.19 | 0.56 | .984 |
| | ಮಹಿಳೆಯರು | 32 | 67.72 | 7.72 | | |

**ತಾಲಿಕೆ–3** ರ ಪ್ರಕಾರ ಪಡೆದ 't' ಮೌಲ್ಯವು 0.56 ಆಗಿದ್ದು 't' ಪಟ್ಟಿಯ ಮೌಲ್ಯವು 0.05 ಲಕ್ಷ್ಯರ್ಹತೆ ಮಟ್ಟದಲ್ಲಿ 1.96 ಆಗಿರುತ್ತದೆ. ಪಡೆದಂತಹ 't' ಮೌಲ್ಯವು 't' ಪಟ್ಟಿ ಮೌಲ್ಯಕ್ಕಿಂತ ಕಡಿಮೆ ಇರುವುದರಿಂದ ಶೂನ್ಯ ಪ್ರಾಕಲ್ಪನೆತನ್ನು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ಬುದ್ಧಿಮಾಂದ್ಯಮಕ್ಕಳ ಸಂಸ್ಥೆಗೆ ದಾಖಲಾದ ಬುದ್ಧಿಮಾಂದ್ಯ ಮಕ್ಕಳ ಪೋಷಕರಲ್ಲಿ ಬುದ್ಧಿಮಾಂದ್ಯಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದಲ್ಲಿ ಯಾವುದೇ ಮಹತ್ವಪೂರ್ಣ ವ್ಯತ್ಯಾಸ ಕಂಡುಬರುವುದಿಲ್ಲ. ಆದ್ದರಿಂದ ಈ ಪ್ರಾಕಲ್ಪನೆಯನ್ನು ಒಪ್ಪಿಕೊಳ್ಳಲಾಗಿದೆ.

**ಶೈಕ್ಷಣಿಕ ನಿಮಿತಾರ್ಥಗಳು**

- ಬುದ್ಧಿಮಾಂದ್ಯ ಮಕ್ಕಳ ಜೀವನ ಮೌಲ್ಯಯುತವಾದುದು ಮತ್ತು ಅವರ ಪೋಷಣೆ ಅಗತ್ಯವಾದುದು. ಪ್ರಾಥಮಿಕ ಹಂತದಿಂದಲೇ ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಅವರಲ್ಲಿ ಸಾಮಾಜಿಕ ಜ್ಞಾನ ಮತ್ತು ಕೌಶಲಗಳಲ್ಲಿ ಅಭಿವೃದ್ಧಿಗೊಳಿಸಬಹುದು.
- ವಿಶೇಷ ಶಿಕ್ಷಣವು ಬುದ್ಧಿಮಾಂದ್ಯಮಕ್ಕಳಲ್ಲಿ ಕ್ರಮಬದ್ಧವಾಗಿ ಐಕ್ಯತೆ ಮತ್ತು ಶಿಸ್ತನ್ನು ಬೆಳೆಸುತ್ತದೆ.
- ವಿಶೇಷ ಶಿಕ್ಷಣದಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ಪಠ್ಯೇತರ ಚುಟವಟಿಕೆಗಳು ಕ್ರೀಡೆ, ಕ್ಷೇತ್ರ ಪ್ರವಾಸಗಳ ಮೂಲಕ ಶಿಕ್ಷಣವನ್ನು ನೀಡಬೇಕು.
- ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪಠ್ಯಪುಸ್ತಕಗಳ ಅವಶ್ಯಕತೆ ಇದ್ದು, ಪಠ್ಯೇತರ ಚುಟವಟಿಕೆಯಲ್ಲಿ ವಿಶೇಷ ಶಿಕ್ಷಣವನ್ನು ಮುಖ್ಯ ವಿಷಯವನ್ನಾಗಿ ಇಟ್ಟುಕೊಂಡು ಕಾರ್ಯಕ್ರಮ ನಡೆಸಬೇಕು.
- ವಿಶೇಷ ಶಿಕ್ಷಣವನ್ನು ಬೋಧನೆ ಮಾಡುವ ಶಿಕ್ಷಕರಲ್ಲಿ ಹೆಚ್ಚಿನ ಧನಾತ್ಮಕ ಜ್ಞಾನ ಮತ್ತು ಮನೋಭಾವನೆ ಬೆಳೆಸಲು ವಿಚಾರ ಸಂಕೀರ್ಣಗಳನ್ನು ಕೈಗೊಳ್ಳಬೇಕು.

**ಉಪಸಂಹಾರ**

ನ್ಯೂನತೆಯುಳ್ಳ ಪ್ರತಿಯೊಂದು ಮಗುವಿನ ಬದುಕು ಸಾರ್ಥಕವಾಗಬೇಕಾದರೆ ಮತ್ತು ಸ್ವಾವಲಂಬಿಗಳಾಗಿ ತಮ್ಮನ್ನು ತಾವು ನಿರ್ವಹಿಸಿಕೊಳ್ಳಲು ಉತ್ತಮ ಶಿಕ್ಷಣ ಮತ್ತು ತರಬೇತಿ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಇದನ್ನು ನೀಡುವ ಜವಾಬ್ದಾರಿಯನ್ನು ಸರ್ಕಾರ, ಸಮಾಜದ ಸದಸ್ಯರು, ಶಾಲಾ ಶಿಕ್ಷಕರು ಹಾಗೂ ಕುಟುಂಬದ ಸದಸ್ಯರು ಹೊರಬೇಕಾಗುತ್ತದೆ ಎಂಬ ಅಂಶಗಳನ್ನೆಲ್ಲಾ ಸಂಗ್ರಹಿಸಿ ಅಧ್ಯಯನ ಮಾಡಲಾಗಿದ್ದು, ಬುದ್ಧಿಮಾಂಧ್ಯತೆಗೆ ಕಾರಣ, ಲಕ್ಷಣಗಳು, ನಿವಾರಣೆಗಳು, ಸವಲತ್ತುಗಳ ಬಗ್ಗೆ ಮಾರ್ಗದರ್ಶನ ನೀಡುವ ವಿಷಯವಾಗಿದೆ. ಹಾಗೂ ಅನ್ವೇಷಣೆ ಮತ್ತು ಸಂಶೋಧನೆಗಳ ಫಲಶೃತಿಗಳನ್ನು ಒಳಗೊಂಡಿದೆ.

ಬುದ್ಧಿಮಾಂದ್ಯರನ್ನು ತಮ್ಮ ಕೆಲಸ ತಾವು ಮಾಡಿಕೊಳ್ಳುವುದನ್ನು ತಿಳಿಸಿಕೊಡುವುದು, ವಸ್ತುಗಳ ಬಗ್ಗೆ ಅರಿವು ಮೂಡಿಸುವುದು, ಪೋಷಕರ ಆತಂಕವನ್ನು ತಗ್ಗಿಸುವುದು. ಆಧುನಿಕ ಉಪಕರಣಗಳ ಬಳಕೆಯಿಂದ

ಮಕ್ಕಳಲ್ಲಿ ಕೌಶಲತೆ ಬೆಳೆಸುವುದು. ಇದರಿಂದ ಬುದ್ಧಿಮಾಂದ್ಯ ಮಕ್ಕಳಲ್ಲಿರುವ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿಯಾಗಿದೆ.

ಅಧ್ಯಯನದ ಮಾಹಿತಿಯನ್ನು ವಿಶ್ಲೇಷಿಸಲು ಸಂಖ್ಯಾಶಾಸ್ತ್ರ ತಂತ್ರವಾದ 't' ಪರೀಕ್ಷಣವನ್ನು ಬಳಸಿಕೊಳ್ಳಲಾಗಿದ್ದು, ಬುದ್ಧಿಮಾಂದ್ಯ ಮಕ್ಕಳ ಸಂಸ್ಥೆಯ ಪ್ರಾಂಶುಪಾಲರಲ್ಲಿ ಇರುವ ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತ ಅಭಿಪ್ರಾಯವನ್ನು ತಿಳಿಯಲಾಗಿದೆ. ಬುದ್ದಿಮಾಂಧ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಅಭಿಪ್ರಾಯದ ಕುರಿತು ಪುರುಷ ಮತ್ತು ಮಹಿಳಾ ಶಿಕ್ಷಕರ ನಡುವೆ ಇರುವ ವ್ಯತ್ಯಾಸವನ್ನು ತಿಳಿಯಲಾಗಿದೆ. ಬುದ್ಧಿಮಾಂದ್ಯಮಕ್ಕಳ ಸಂಸ್ಥೆಗೆ ದಾಖಲಾದ, ಬುದ್ಧಿಮಾಂದ್ಯಮಕ್ಕಳ ಪೋಷಕರಲ್ಲಿ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ಇರುವ ಅಭಿಪ್ರಾಯದಲ್ಲಿನ ವ್ಯತ್ಯಾಸವನ್ನು ತಿಳಿಯಲಾಗಿದೆ. ಹಾಗಾಗಿ ಈ ಅಧ್ಯಯನದಲ್ಲಿ ***"ಬುದ್ಧಿಮಾಂದ್ಯ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಸ್ಯೆಗಳು"*** ಎಂಬ ಅಧ್ಯಯನವು ಪರಿಮಾಣಾತ್ಮಕ ಹಾಗೂ ಗುಣಾತ್ಮಕ ನಿರ್ಧಾರವನ್ನು ಒಳಗೊಂಡಿದ್ದು, ಶೂನ್ಯ ಪ್ರಾಕಲ್ಪನೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದ್ದು, ಅದಕ್ಕನುಗುಣವಾಗಿ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯನ್ನು ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು**


- ನಾಗವೀಣ ಬಿ. (2008). ಬುದ್ದಿಮಾಂದ್ಯ ಮಕ್ಕಳ ವಿಶೇಷ ಶಾಲೆಗಳ ಶೈಕ್ಷಣಿಕ ಸವಲತ್ತುಗಳ ಕುರಿತು ಒಂದು ಅಧ್ಯಯನ. ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ (ಅಪ್ರಕಟಿತ ಪ್ರೌಢ ಪ್ರಬಂಧ)
- Batra, P. (1991). How children think and learn: a socio-psychological study of Grades I & II children in the Betul district of Madhya Pradesh. In M.B.Buch (Ed.), Fifth Survey of Educational Research (1988-1992) Vol.-II. New Delhi: NCERT.
- Buch, M. B. (1988). A Study of Family Background Variables, Some Motivational Variables, Cognitive Characteristics and the School Performance of Primary School Children. In M.B.Buch (Ed.), Fifth Survey of Educational Research (1998-1992) Vol.-II. New Delhi: NCERT
- Dave, P. N. (1992). Primary Education. In M.B.Buch (Ed.), Fifth Survey of Educational Research (1988-1992) Vol. -1. New Delhi: NCERT.
- Geam H. Haar, Special Education: A systematic approach to efficiency and effectiveness AACTE larrenges.
- Geol M.M. (1986), Investment on physical handicapped persons in Hariyana, in Buch M.B.(1983)4th Survey Research in Education, Vol-I NCERT. New Delhi.